ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 10–12–2014

**ಪತ್ರಿಕಾ ಆಮಂತ್ರಣ**

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | **Bengaluru International Film Festival: An Interaction with**<br><br>Ms. Sumana Mukherjee, Director, *Dreamz-The Movie*<br>Mr. Mahesh Limaye, Director, *Yellow*<br>*Ms. Kavitha Lankesh, Director Kariya Kanbitta*<br>and others | **11-12-2014 Thursday, 12:00 Noon** | **Conference Hall, Vaartha Bhavana, Dept of Information & Public Relations, Infantry Road, Bengaluru - 560 001** |
| 2 | ಬೆಂಗಳೂರು 7 ನೇ ಅಂತರ್‌ರಾಷ್ಟ್ರೀಯ ಸಿನಿಮೋತ್ಸವ ಸಮಾರೋಪ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ:<br>ಪ್ರಶಸ್ತಿ ಪ್ರದಾನ:<br><br>ಶ್ರೀ ವಾಜುಬಾಯಿ ರೂಢಬಾಯಿ ವಾಲ<br>ಘನತೆವೆತ್ತ ರಾಜ್ಯಪಾಲರು, ಕರ್ನಾಟಕ<br><br>ಮುಖ್ಯ ಅತಿಥಿಗಳು:<br>ಶ್ರೀ ಆರ್. ರೋಷನ್ ಬೇಗ್, ವಾರ್ತಾ ಮತ್ತು ಸಾರ್ವಜನಿಕ ಮತ್ತು ಹಜ್ ಸಚಿವರು | 11–12–2014<br>ಗುರುವಾರ<br>ಸಂಜೆ<br>6–00 ಗಂಟೆಗೆ | ಡಾ: ಬಿ.ಆರ್. ಅಂಬೇಡ್ಕರ್ ಭವನ<br>ಮಿಲ್ಲರ್ಸ್ ರಸ್ತೆ,<br>ವಸಂತನಗರ,<br>ಬೆಂಗಳೂರು |

**ನಿರ್ದೇಶಕರ ಪರವಾಗಿ**

**ಪತ್ರಿಕಾ ಪ್ರಕಟಣೆ**

# ಮಾರ್ಪಡಿಸಿದ ರಾಷ್ಟ್ರೀಯ ಕೃಷಿ ವಿಮಾ ಯೋಜನೆ

**ಬೆಂಗಳೂರು, ಡಿಸೆಂಬರ್ 10 (ಕರ್ನಾಟಕ ವಾರ್ತೆ)**

ರಾಷ್ಟ್ರೀಯ ಬೆಳೆ ವಿಮಾ ಕಾರ್ಯಕ್ರಮದಡಿ 2014–15 ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಮಾರ್ಪಡಿಸಿದ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಿ ಅಧಿಸೂಚಿಸಲಾಗಿದೆ. 2014–15 ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ 19 ಬೆಳೆಗಳಾದ ಭತ್ತ (ನೀರಾವರಿ), ಜೋಳ (ನೀರಾವರಿ) ಜೋಳ (ಮಳೆ ಆಶ್ರಿತ) ರಾಗಿ (ನೀರಾವರಿ), ರಾಗಿ (ಮಳೆ ಆಶ್ರಿತ) ಮುಸುಕಿನ ಜೋಳ (ನೀರಾವರಿ), ಮುಸುಕಿನ ಜೋಳ (ಮಳೆ ಆಶ್ರಿತ) ಗೋಧಿ (ನೀರಾವರಿ) ಗೋಧಿ (ಮಳೆ ಆಶ್ರಿತ) ಕಡಲೆ (ನೀರಾವರಿ) ಕಡಲೆ (ಮಳೆಆಶ್ರಿತ) ಉದ್ದು (ಮಳೆ ಆಶ್ರಿತ) ಹುರುಳೀ (ಮಳೆ ಆಶ್ರಿತ) ಹೆಸರು (ಮಳೆ ಆಶ್ರಿತ) ಅಗಸೆ (ಮಳೆ ಆಶ್ರಿತ) ಸೂರ್ಯಕಾಂತಿ (ನೀರಾವರಿ), ಸೂರ್ಯಕಾಂತಿ (ಮಳೆ ಆಶ್ರಿತ) ನೆಲಗಡಲೆ (ಶೇಂಗಾ) (ಮಳೆ ಆಶ್ರಿತ) ಮತ್ತು ಕುಸುಮೆ (ಮಳೆ ಆಶ್ರಿತ) ಇವುಗಳನ್ನು ಹಿಂಗಾರು ಹಂಗಾಮಿಗೆ ಹಾಗೂ 5 ಬೆಳೆಗಳಾದ ಭತ್ತ (ನೀರಾವರಿ) ರಾಗಿ (ನೀರಾವರಿ), ನೆಲಗಡಲೆ (ಶೇಂಗಾ) (ನೀರಾವರಿ), ನೆಲಗಡಲೆ (ಶೇಂಗಾ) (ಮಳೆ ಆಶ್ರಿತ) ಮತ್ತು ಸೂರ್ಯಕಾಂತಿ (ನೀರಾವರಿ) ಇವುಗಳನ್ನು 2014–15 ರ ಬೇಸಿಗೆ ಹಂಗಾಮಿಗೆ ಅಧಿಸೂಚಿಸಲು ಹಾಗೂ ಇವುಗಳಲ್ಲಿ ತಾಲ್ಲೂಕುವಾರುಮುಖ್ಯ ಬೆಳೆಗಳನ್ನು ಗ್ರಾಮ ಪಂಚಾಯಿತಿ ಮಟ್ಟಕ್ಕೆ ಹಾಗೂ ಉಳಿದ ಬೆಳೆಗಳನ್ನು ಹೋಬಳಿ ಮಟ್ಟದಲ್ಲಿ ಅನಷ್ಠಾನಗೊಳಿಸಲುಅಧಿಸೂಚಿಸಲಾಗಿದೆ. ಈ ಜಿಲ್ಲೆಗಳಲ್ಲಿ ಬಿತ್ತನೆ ವಿಫಲಗೊಂಡಲ್ಲಿ ಬೆಳೆ ವಿಮಾ ನಷ್ಟ ಪರಿಹಾರ ನೀರಡಲು, ಬಿತ್ತನೆಯಿಂದ ಕಟಾವು ಹಂತದವರೆಗಿನ ಮಧ್ಯದ ಅವಧಿಯಲ್ಲಿ ಬೆಳೆ ನಷ್ಟ ಸಂಭವಿಸಿದರೆ ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಕಟಾವಿನ ನಂತರ ಬೆಳೆ ನಷ್ಟವಾದರೆ ಮಾರ್ಗಸೂಚಿಯಂತೆ ಬೆಳೆ ವಿಮಾ ನಷ್ಟ ಪರಿಹಾರ ನೀಡಲು ತೀರ್ಮಾನಿಸಲಾಗಿದೆ.

ಈ ಯೋಜನೆಯು ಬೆಳೆಸಾಲ ಪಡೆಯುವ ರೈತರಿಗೆ ಕಡ್ಡಾಯವಾಗಿದ್ದು, ಬೆಳೆ ಸಾಲ ಪಡೆಯದಂತಹ ರೈತರಿಗೆ ಐಚ್ಛಿಕವಾಗಿರುತ್ತದೆ. ಈ ಯೋಜನೆಯಡಿಯಲ್ಲಿ ಬೆಳೆ ಸಾಲ ಪಡೆಯದ ರೈತರು ಅಂದಾಜು ಬೆಳೆ ಬಿತ್ತನೆ ಆಧಾರದ ಮೇಲೆ ಬಿತ್ತನೆ ಪೂರ್ವದಲ್ಲೆ ಪಾಲ್ಗೊಳ್ಳಬಹುದು. ಬೆಳೆ ವಿಮೆಗೆ ನೋಂದಾಯಿಸಿದ ನಂತರ ಬೇರೆ ಬೆಳೆ ಬಿತ್ತನೆ ಮಾಡಿದಲ್ಲಿ ಯೋಜನೆಯಲ್ಲಿ ಭಾಗವಹಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದಿಂದ 30 ದಿವಸದೊಳಗೆ ನೊಂದಾಯಿಸಿದ ಆರ್ಥಿಕ ಸಂಸ್ಥೆಗಳಲ್ಲಿ ಬಿತ್ತನೆ ದೃಢೀಕರಣ ನೀಡಿ ವಿಮೆ ಮಾಡಿಸಿದ ಬೆಳೆಯನ್ನು ಬದಲಾಯಿಸತಕ್ಕದ್ದು ಹಾಗೂ ಅಂತಹ ಸಂದರ್ಭದಲ್ಲಿ ಹೆಚ್ಚುವರಿ ವಿಮಾ ಕಂತಿನ ವ್ಯತ್ಯಾಸದ ಮೊತ್ತವನ್ನು ರೈತರು ಭರಿಸತಕ್ಕದ್ದು, ಬೆಳೆ ಸಾಲ ಪಡೆಯದ ರೈತರು ಯೋಜನೆಯಡಿ ಭಾಗವಹಿಸುವ ಸಮಯಕ್ಕೆ ಬೆಳೆ ಬಿತ್ತನೆಯಾಗಿದ್ದಲ್ಲಿ ಬಿತ್ತನೆ ಪ್ರಮಾಣ ಪತ್ರವನ್ನು ನೀಡತಕ್ಕದ್ದು. ಬೆಳೆ ಸಾಲ ಪಡೆಯದ ರೈತರು ಯೋಜನೆಯಲ್ಲಿ ಪಾಲ್ಗೊಳ್ಳಲು ಹತ್ತಿರದ ಬ್ಯಾಂಕುಗಳನ್ನು ಸಂಪರ್ಕಿಸಿ ಅರ್ಜಿಯೊಂದಿಗೆ ಭೂಮಿ ಹೊಂದಿರುವುದಕ್ಕೆ ದಾಖಲಾತಿಗಳಾದ ಪಹಣಿ/ಖಾತೆ ಪತ್ರ/ಕಂದಾಯ ರಶೀದಿ ನೀಡಬೇಕು. ಗ್ರಾಮಲೆಕ್ಕಿಗರಿಂದ ಬಿತ್ತನೆ ದೃಢೀಕರಣ ಪತ್ರ ಪಡೆದು ನೀಡಬೇಕು. ಬ್ಯಾಂಕಿನಲ್ಲಿ ಖಾತೆಯನ್ನು ತೆರೆದು ವಿಮಾ ಕಂತನ್ನು ಕಟ್ಟಬೇಕು.

ಹಿಂಗಾರು ಹಂಗಾಮಿನಲ್ಲಿ ಬೆಳೆ ಸಾಲ ಪಡೆದ ಹಾಗೂ ಬೆಳೆ ಸಾಲ ಪಡೆಯದೇ ಇರುವ ಎಲ್ಲಾ ರೈತರು ಪಾಲ್ಗೊಳ್ಳಲು ಕೊನೆಯ ದಿನಾಂಕ: 31-12-2014 ಹಾಗೂ ಬೇಸಿಗೆ ಹಂಗಾಮಿನಲ್ಲಿ ಪಾಲ್ಗೊಳ್ಳಲು ಕೊನೆಯ ದಿನಾಂಕ: 28-02-2015.

ಪ್ರಕೃತಿ ವಿಕೋಪ ಅಂದರೆ, ಆಲೀಕಲ್ಲು ಮಳೆ ಮತ್ತು ಭೂ ಕುಸಿತ ಇವುಗಳಿಂದ ಬೆಳೆ ನಷ್ಟ ಸಂಭವಿಸಿದಲ್ಲಿ 2014-15 ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ವೈಯಕ್ತಿಕವಾಗಿ ಬೆಳೆ ನಷ್ಟ ನಿರ್ಧರಿಸಿ ಬೆಳೆ ವಿಮಾ ನಷ್ಟ ಪರಿಹಾರವನ್ನು ನೀಡಲಾಗುವುದು. ಈ ಕಾರಣಗಳಿಂದ ನಷ್ಟ ಸಂಭವಿಸಿದರೆ ವಿಮಾ ಮಾಡಿಸಿದ ರೈತರು ಬೆಳೆ ನಷ್ಟವಾದ 48 ಗಂಟೆಯೊಳಗೆ ಅರ್ಜಿಯನ್ನು ಸಂಬಂಧಿತ ಬ್ಯಾಂಕಿನಲ್ಲಿ ಅಥವಾ ನೇರವಾಗಿ ಅಗ್ರಿಕಲ್ಚರ್ ಇನ್ಶೂರೆನ್ಸ್ ಕಂಪನಿ ಆಫ್ ಇಂಡಿಯಾ ಲಿ., ಬೆಂಗಳೂರು ಇವರಿಗೆ ನೀಡಬೇಕು. ಅರ್ಜಿಯನ್ನು ಬೆಳೆಯ ವಿವರಗಳನ್ನು, ನಷ್ಟಕ್ಕೆ ಕಾರಣವನ್ನು ಹಾಗೂ ಬೆಳೆ ನಷ್ಟದ ವ್ಯಾಪ್ತಿಯ ವಿವರಗಳನ್ನು ನೀಡಬೇಕು. ವಿಮಾ ಸಂಸ್ಥೆಯು ವಿವರಗಳನ್ನು ಪಡೆದು ನಷ್ಟ ನಿರ್ಧಾರಕರನ್ನು ರೈತರ ಜಮೀನಿಗೆ ಕಳುಹಿಸಿಕೊಡುತ್ತದೆ.

ಈ ಅವಕಾಶವನ್ನು ಉಪಯೋಗಿಸಿಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ರೈತರು ಬೆಳೆ ವಿಮಾ ಯೋಜನೆಯಡಿಯಲ್ಲೊ ಪಾಲ್ಗೊಳ್ಳಲು ಈ ಮೂಲಕ ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಮೀಪದ ರೈತ ಸಂಪರ್ಕ ಕೇಂದ್ರ ಅಥವಾ ಬ್ಯಾಂಕುಗಳನ್ನು ಸಂಪರ್ಕಿಸುವುದು.

ಬಾಬು:ಜಿಪಿಆರ್.

# ಕೋಳಿ ಸಾಕಾಣಿಕಾ ತರಬೇತಿ

**ಬೆಂಗಳೂರು, ಡಿಸೆಂಬರ್ 10 (ಕರ್ನಾಟಕ ವಾರ್ತೆ)**

ರಾಜ್ಯ ಕೋಳಿ ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಹೆಸರಘಟ್ಟ, ಬೆಂಗಳೂರು -560 089 ಇಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖಾವತಿಯಿಂದ ದಿನಾಂಕ 15-12-2014 ರಿಂದ 20-12-2014 ರವರೆಗೆ 06 ದಿನಗಳ ಕಾಲ ಕೋಳಿ ಸಾಕಾಣಿಕೆಯ ಬಗ್ಗೆ ತರಬೇತಿಯನ್ನು ಏರ್ಪಡಿಸಲಾಗಿದ್ದು, ಇಚ್ಚೆಯುಳ್ಳವರು ಸದರಿ ತರಬೇತಿಗೆ ಹಾಜರಾಗಲು ತಿಳಿಸಲಾಗಿದೆ. ಸದರಿ ತರಬೇತಿಗೆ ವಿದ್ಯಾರ್ಥಿಗಳಿಗೆ ನಿಯಮಾನುಸಾರ ಪ್ರೋತ್ಸಾಹ ಧನವನ್ನು ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಸಂದಪರ್ಕಿಸಬೇಕಾದ ವಿಳಾಸದ ದೂರವಾಣಿ ಸಂಖ್ಯೆ: 080 – 28466093. ಪ್ರೋತ್ಸಾಹ ಧನ ಒಂದು ದಿನಕ್ಕೆ ರೂ. 150/- ರಂತೆ 6 ದಿನಗಳೀಗೆ ಒಟ್ಟು ರೂ 9-00 ನೀಡಲಾಗುವುದು.

ಬಾಬು:ಜಿಪಿಆರ್.

# POULTRY TRAINING PROGRAMME

Bangalore, December 10 (Karnataka Information)

The State Poultry Breeding and Training Centre, Hesaraghatta, Bangalore – 560 089, Under the Department of Animal Husbandry and Veterinary Services, has organised 06 days Poultry Training Programme from 15-12-2014 to 20-12-2014.

Interested persons may attend the Training Programme at Hesaraghatta, During the Training period incentive will be given to the trainess as per rules. For details contact Phone Not. 080 – 28466093. Incentive amount Rs. 150/- per day for 6 days Rs. 900/- will be given to the trainees.

babu/gpr.

## ಅಧಿಕಾರ ಸ್ವೀಕಾರ

**ಬೆಂಗಳೂರು, ಡಿಸೆಂಬರ್ 10 (ಕರ್ನಾಟಕ ವಾರ್ತೆ)**

**ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಕಾರ್ಯಕಾರಿ ಅಧ್ಯಕ್ಷರಾಗಿ ಶ್ರೀ ಎಸ್.ಆರ್. ಪಾಟೀಲ್ ಅವರು ಇಂದು ಅಧಿಕಾರ ಸ್ವೀಕರಿಸಿದರು.**

**ಇದರೊಂದಿಗೆ ಛಾಯಾಚಿತ್ರ ಲಗತ್ತಿಸಿದೆ )**

## ಹೊಸ ಹೋಬಳಿ, ಉಪವಿಭಾಗ ಸ್ಥಾಪನೆಗೆ ಸರ್ಕಾರದ ಚಿಂತನೆ: ಸಚಿವ ಶ್ರೀನಿವಾಸ ಪ್ರಸಾದ್

**ಬೆಳಗಾವಿ, ಡಿ.10 (ಕರ್ನಾಟಕ ವಾರ್ತೆ) :**

ಹೊಸ ತಾಲೂಕುಗಳ ರಚನೆಯನ್ನು ಸರ್ಕಾರ ಕೈಬಿಟ್ಟಿಲ್ಲ. ಹೊಸ ತಾಲೂಕುಗಳ ಜೊತೆಗೆ ಹೊಸ ಹೋಬಳಿ, ಉಪವಿಭಾಗ ಕೇಂದ್ರಗಳನ್ನು ಆರಂಭಿಸುವ ಕುರಿತಂತೆ ಸರ್ಕಾರದ ಚಿಂತನೆಯಲ್ಲಿದೆ ಎಂದು ಕಂದಾಯ ಸಚಿವ ಆರ್.ಶ್ರೀನಿವಾಸ ಪ್ರಸಾದ್ ತಿಳಿಸಿದರು.

ಮೇಲ್ಮನೆ ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ಮಹಾಂತೇಶ ಕವಟಗಿಮಠ ಅವರು, ಹಿಂದಿನ ಬಿಜೆಪಿ ಸರ್ಕಾರ ಘೋಷಿಸಿದ 43 ತಾಲೂಕುಗಳ ಪೈಕಿ ಕಿತ್ತೂರು ಹಾಗೂ ನಿಪ್ಪಾಣಿ ತಾಲೂಕು ರಚನೆಯಾದರೂ , ಪೂರ್ಣ ಪ್ರಮಾಣದ ಇಲಾಖೆಗಳು ಬಂದಿಲ್ಲ. ಉಳಿದ ತಾಲೂಕುಗಳ ರಚನೆ ಕುರಿತಂತೆ ಕೇಳಿದ ಪ್ರಶ್ನೆಗೆ ಸಚಿವರು ಉತ್ತರ ನೀಡಿದರು.

43ತಾಲೂಕುಗಳ ಪೈಕಿ 5ತಾಲೂಕುಗಳು ವಾಸುದೇವ ರಾವ್ ಆಯೋಗ, ಟಿ.ಎಂ.ಹುಂಡೇಕರ್ ಸಮಿತಿ, ಪಿ.ಸಿ.ಗದ್ದೀಗೌಡರ್ ಹಾಗೂ ಎಂ.ಬಿ.ಪಾಟೀಲ್ ಸಮಿತಿಯ ಶಿಫಾರಸ್ಸಿನಲ್ಲಿಲ್ಲ. ಈ ಕುರಿತಂತೆ ಸರ್ಕಾರ ಪರಿಶೀಲನೆ ನಡೆಸುತ್ತಿದೆ. ಉತ್ತಮ ಆಡಳಿತದ ದೃಷ್ಟಿಯಿಂದ ತಾಲೂಕುಗಳ ರಚನೆಯಾಗಬೇಕೆಂದು ಸರ್ಕಾರದ ಇಚ್ಛೆಯಾಗಿದೆ. ಹೊಸ ತಾಲೂಕುಗಳ ಘೋಷಣೆ ಮಾಡಿದ ಹಿಂದಿನ ಸರ್ಕಾರ ತಾಲೂಕು ರಚನೆಗೆ ಬೇಕಾದ

ಹಣಕಾಸಿನ ವ್ಯವಸ್ಥೆ ಮಾಡಿಕೊಂಡಿರಲಿಲ್ಲ. ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಹಂತಹಂತವಾಗಿ ಹೊಸ ತಾಲೂಕುಗಳ ರಚನೆಯನ್ನು ಮಾಡಲು ಕ್ರಮ ಕೈಗೊಳ್ಳಲಿದೆ ಎಂದರು.

**ಇನಾಂ ಭೂ ಮಂಜೂರಾತಿ ಅವಧಿ ವಿಸ್ತರಣೆ:**

ಹಿಂದುಳಿದ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿನ ಇನಾಮ್ ಜಮೀನುಗಳನ್ನು ಮರು ಮಂಜೂರಾತಿಗಾಗಿ ಅರ್ಜಿ ಸಲ್ಲಿಸಲು ಆರು ತಿಂಗಳವರೆಗೆ ಕಾಲಾವಧಿಯನ್ನು ವಿಸ್ತರಿಸಿ, ಅರ್ಹರಿಗೆ ಭೂ ಮಂಜೂರಾತಿ ಮಾಡಿಕೊಡಲಾಗುವುದು ಎಂದು ಕಂದಾಯ ಸಚಿವರು ಹೇಳಿದರು.

ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಇನಾಮ್ ಭೂಮಿಯನ್ನು ಉಳುಮೆ ಮಾಡುತ್ತಿರುವವರಿಗೆ ಮಂಜೂರಾತಿ ನೀಡುವ ಕಾಲಾವಧಿ ಮೀರಿರುವುದರಿಂದ ಬಹಳಷ್ಟು ಬಡವರು ಮಂಜೂರಾತಿ ಪಡೆಯಲು ವಿಫಲರಾಗಿದ್ದಾರೆ. ಕಾಲಾವಕಾಶದ ಮೂಲಕ ಇನಾಮ್ ಭೂಮಿಯನ್ನು ಮಂಜೂರಾತಿ ಮಾಡಬೇಕೆಂಬ ಸದಸ್ಯ ರಾಮಚಂದ್ರ ಗೌಡರ ಪ್ರಶ್ನೆಗೆ ಸಚಿವರು ಉತ್ತರಿಸಿದರು.

**ಬೆಳೆ ಪರಿಹಾರ ನಿಯಮ ಪರಿಷ್ಕರಣೆಗೆ ಮನವಿ:** ಪ್ರಕೃತಿ ವಿಕೋಪದಿಂದ ಹಾನಿಗೀಡಾಗುವ ಬೆಳೆ ಹಾನಿ, ಮನೆ ಹಾನಿ ಇತ್ಯಾದಿಗಳಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಪರಿಹಾರವನ್ನು ಸರ್ಕಾರ ವಿತರಿಸಿದೆ. ನಷ್ಟಕ್ಕೂ ಮತ್ತು ನೀಡುವ ಪರಿಹಾರಕ್ಕೂ ಹೆಚ್ಚಿನ ಅಂತರವಿದೆ. ಇದನ್ನು ತಪ್ಪಿಸಿ ಹೆಚ್ಚಿನ ಪರಿಹಾರ ವಿತರಣೆ ಸಾಧ್ಯವಾಗುವಂತೆ ಮಾರ್ಗಸೂಚಿಗಳ ಪರಿಷ್ಕರಣೆಗೆ ಕೇಂದ್ರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಕಂದಾಯ ಸಚಿವರು ಹೇಳಿದರು.

ಅತಿವೃಷ್ಟಿಯಿಂದ ರಾಜ್ಯದ 9 ತಾಲೂಕುಗಳಲ್ಲಿ 615.30ಕೋಟಿ ನಷ್ಟವಾಗಿದ್ದು, 388.29ಕೋಟಿ ರೂ. ನೆರವಿಗೆ ಕೇಂದ್ರಕ್ಕೆ ಬೇಡಿಕೆ ಸಲ್ಲಿಸಲಾಗಿತ್ತು. 105.96ರೂ. ಪರಿಹಾರವನ್ನು ರಾಜ್ಯ ಸರ್ಕಾರ ಈಗಾಗಲೇ ನೀಡಿದೆ. ಆಲಿಕಲ್ಲು ಮಳೆಯಿಂದ ಹಾನಿಗೊಳಗಾದವರಿಗೆ 223.76ಕೋಟಿ ರೂ. ಪರಿಹಾರ ವಿತರಿಸಲಾಗಿದೆ ಎಂದು ಅಮರನಾಥ ಪಾಟೀಲ್ ಅವರ ಪ್ರಶ್ನೆಗೆ ಸಚಿವರು ಉತ್ತರಿಸಿದರು.

**11ಇ ಸ್ಕೆಚ್ ವಿತರಣೆ:**

ಅರ್ಜಿ ಸಲ್ಲಿಸಿರುವ ಎಲ್ಲಾ ಭೂ ಮಾಲೀಕರಿಗೆ ಮಾರ್ಚ್ 15 ರೊಳಗೆ 11ಇ ಸ್ಕೆಚ್‌ಗಳನ್ನು ವಿತರಿಸಲಾಗುವುದೆಂದು ಸಚಿವರು ಹೇಳಿದರು.

ಸದಸ್ಯ ಮರಿತಿಬ್ಬೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಭೂ ಮಾಲೀಕರು ಎಲ್ಲಾ ದಾಖಲೆಗಳನ್ನು ಸಲ್ಲಿಸಿದಲ್ಲಿ 30 ದಿನಗಳ ಒಳಗೆ 11ಇ ಸ್ಕೆಚ್‌ಗಳನ್ನು ನೀಡಲಾಗುತ್ತಿದೆ. ಸರ್ವೆ ಮತ್ತು ಪಹಣಿ ದಾಖಲೆಗಳಲ್ಲಿ ನ್ಯೂನ್ಯತೆ ಇರುವಂತಹ ಪ್ರಕರಣಗಳಲ್ಲಿ ಮಾತ್ರ ತಡವಾಗುತ್ತಿದೆ ಎಂದು ತಿಳಿಸಿದರು.

ಇಲಾಖೆಯಲ್ಲಿ 3425 ಭೂಮಾಪಕರಿದ್ದು, ಅವರಲ್ಲಿ 1243 ಭೂಮಾಪಕರನ್ನು ಇಲಾಖಾ ಮತ್ತು ತಾಲ್ಲೂಕು ಕಚೇರಿಯ ಕೆಲಸಕ್ಕೆ ಬಳಸಿಕೊಂಡು 2182 ಮಂದಿ ಭೂಮಾಪಕರ ಸೇವೆಯನ್ನು ಸರ್ವೆ ಕೆಲಸಕ್ಕೆ ಬಳಸಿಕೊಳ್ಳಲಾಗುತ್ತಿದೆ. ರಾಜ್ಯದಲ್ಲಿ 11ಇ ಸ್ಕೆಚ್‌ಗಾಗಿ ಡಿಸೆಂಬರ್ 30 ರವರಗೆ 2,77,896 ಭೂ ಮಾಲೀಕರು ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಿದ್ದಾರೆ. ಅದರಲ್ಲಿ 1,27,978 ಅರ್ಜಿಗಳು ವಿಲೇಯಾಗಿದ್ದು 1,49,918 ಅರ್ಜಿಗಳು ಬಾಕಿ ಇದೆ. ಈ ಬಾಕಿ ಇರುವ ಅರ್ಜಿಗಳನ್ನು ವಿಲೇವಾರಿ ಮಾಡಲು ಖಾಸಗಿ ಸಂಸ್ಥೆಗಳ ಸಹಯೋಗದೊಂದಿಗೆ ಅಳತೆ ಕಾರ್ಯವನ್ನು ಪ್ರಾಯೋಗಿಕವಾಗಿ ಆರಂಭಿಸಲಾಗಿದೆ ಎಂದು ತಿಳಿಸಿದರು.

## ವರ್ಷದೊಳಗೆ ಬೆಣ್ಣೆತೊರಾ ಯೋಜನೆ: ರೈತರ ಹೊಲಕ್ಕೆ ನೀರು: ಸಚಿವ ಎಂ.ಬಿ.ಪಾಟೀಲ್

ಬೆಳಗಾವಿ, ಡಿ.10 (ಕರ್ನಾಟಕ ವಾರ್ತೆ):

ಬೆಣ್ಣೆತೊರಾ ಯೋಜನೆಯನ್ನು ಒಂದು ವರ್ಷದೊಳಗೆ ಪೂರ್ಣಗೊಳಿಸಲಾಗುವುದೆಂದು ಜಲಸಂಪನ್ಮೂಲ ಸಚಿವ ಎಂ.ಬಿ.ಪಾಟೀಲ್ ವಿಧಾನ ಪರಿಷತ್ತಿನಲ್ಲಿ ಬುಧವಾರ ಹೇಳಿದರು.

ಸದಸ್ಯೆ ತಾರಾ ಅನುರಾಧಾ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಮೂಲತಃ ಬೆಣ್ಣೆತೊರಾ ಯೋಜನೆ ಕರ್ನಾಟಕ ನೀರಾವರಿ ನಿಗಮಕ್ಕೆ ಸೇರಿಲ್ಲ. ಬರ ಕಾಮಗಾರಿಗಾಗಿ ಈ ಯೋಜನೆಗಳನ್ನು ಆರಂಭಿಸಲಾಗಿದ್ದು, ಇದೀಗ ಈ ಯೋಜನೆಯನ್ನು ನೀರಾವರಿ ನಿಗಮಕ್ಕೆ ಹಸ್ತಾಂತರಿಸಲಾಗಿದೆ. ಬೆಣ್ಣೆತೊರಾ ಕಾಲುವೆ ಜಾಲದ ಆಧುನೀಕರಣ ಕಾರ್ಯಕ್ಕಾಗಿ 150 ಕೋಟಿ ರೂ.ಗಳನ್ನು ಒದಗಿಸಲಾಗಿದ್ದು, ಒಂದು ವರ್ಷದ ಒಳಗಾಗಿ ಕಾಮಗಾರಿ ಪೂರ್ಣಗೊಳಿಸಿ ರೈತರ ಜಮೀನಿಗೆ ನೀರು ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು.

ಹೈದ್ರಾಬಾದ್ ಕರ್ನಾಟಕದ ನೀರಾವರಿ ಯೋಜನೆಗಳಾದ ಬೆಣ್ಣೆತೊರಾ, ಅಮರ್ಜಾ, ಕಾರಂಜ, ಕೆಳದಂಡೆ ಮುಲ್ಲಾಮಾರಿ ಮತ್ತು ಮೇಲ್ದಂಡೆ ಮುಲ್ಲಾಮಾರಿ ಯೋಜನೆಗಳನ್ನು ಪೂರ್ಣಗೊಳಿಸಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ತಜ್ಞರ ಸಮಿತಿಯನ್ನು ರಚಿಸಲಾಗಿದೆ. ಸಮಿತಿ ವರದಿ ಬಳಿಕ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಸೌದಾಗರ, ಚುಳಕಿನಾಲಾ, ಚಂದ್ರಂಪಳ್ಳಿ, ಹತ್ತಿಕುಣಿ ಹಾಗೂ ಮುಲ್ಲಾಮಾರಿ ಮೇಲ್ದಂಡೆ ಯೋಜನೆ ಕಾಮಗಾರಿಗಳು ಈಗಾಗಲೇ ಪೂರ್ಣಗೊಂಡಿವೆ. ಚಂದ್ರಂಪಳ್ಳಿ, ಹತ್ತಿಕುಣಿ ಯೋಜನೆಗಳ ಕಾಲುವೆ ಜಾಲದ ಆಧುನೀಕರಣ ಕಾರ್ಯವನ್ನು ಮಾರ್ಚ್ 15ರೊಳಗೆ ಪೂರ್ಣಗೊಳಿಸಲಾಗುವುದು. ಅಮರ್ಜಾ, ಗಂಡೋರಿನಾಲ, ಮುಲ್ಲಾಮಾರಿ ಕೆಳದಂಡೆ, ಬೆಣ್ಣೆತೊರಾ, ಭೀಮಾ ಏತ ನೀರಾವರಿ ಯೋಜನೆಗಳನ್ನು 2014-15ನೇ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ ಎಂದರು.

ಮುಲ್ಲಾಮಾರಿ ಕೆಳದಂಡೆ ಯೋಜನೆಯ ಕಾಲುವೆ ಜಾಲವನ್ನು ಸಹ ಆಧುನೀಕರಣಗೊಳಿಸಲು ಕರಡು ಯೋಜನೆ ವರದಿ ಸಿದ್ಧಪಡಿಸಲಾಗುತ್ತಿದೆ. ಅತಿವಾಳ ಏತನೀರಾವರಿ ಯೋಜನೆಯನ್ನು ಹೊರತುಪಡಿಸಿ ಕಾರಂಜಾ ಯೋಜನೆಯನ್ನು ಪ್ರಸ್ತುತ ಸಾಲಿನಲ್ಲಿ ಪೂರ್ಣಗೊಳಿಸಲು 76ಕೋಟಿ ರೂ. ಒದಗಿಸಲಾಗಿದೆ ಎಂದು ಹೇಳಿದರು.

**ಮಾರ್ಚ್ ಒಳಗೆ ಮಳಲೂರು ಯೋಜನೆ:** ಚಿಕ್ಕಮಗಳೂರು ಮಳಲೂರು ಏತ ನೀರಾವರಿ ಯೋಜನೆಯನ್ನು ಎರಡು ಹಂತದಲ್ಲಿ ಕೈಗೊಳ್ಳಲಾಗಿದ್ದು, ಮೊದಲ ಹಂತದ ಕಾಮಗಾರಿಯನ್ನು ಮುಂದಿನ ಮಾರ್ಚ್ ಹಾಗೂ ಎರಡನೇ ಹಂತದ ಕಾಮಗಾರಿಯನ್ನು 2016ರೊಳಗೆ ಪೂರ್ಣಗೊಳಿಸಲಾಗುವುದು ಎಂದು ಜಲಸಂಪನ್ಮೂಲ ಸಚಿವ ಎಂ.ಬಿ.ಪಾಟೀಲ್ ಪರಿಷತ್‌ನಲ್ಲಿ ಹೇಳಿದರು.

ಸದಸ್ಯೆ ಎ.ವಿ.ಗಾಯತ್ರಿ ಶಾಂತೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಭೂ ಸ್ವಾಧೀನ ಪ್ರಕ್ರಿಯೆಯಿಂದ ಯೋಜನೆ ವಿಳಂಬವಾಗಿದ್ದು, ಕಾಲುವೆ ಜಾಲ ನಿರ್ಮಾಣಕ್ಕೆ ಅರಣ್ಯ ಭೂಮಿ ಪಡೆಯಲು ಅಡ್ಡಿಯಾಗಿದೆ. ಭೂಸ್ವಾಧೀನ ಪ್ರಕ್ರಿಯೆಗೆ 26.21ಕೋಟಿ ರೂ. ಯೋಜನೆ ಸಲ್ಲಿಸಲಾಗಿದೆ. ವೆಚ್ಚವನ್ನು ಪರಿಷ್ಕರಿಸುವ ಕುರಿತು ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ಯೋಜನೆಗೆ ಇದುವರೆಗೆ 1.87ಕೋಟಿ ರೂ. ವೆಚ್ಚ ಮಾಡಲಾಗಿದ್ದು, ಯೋಜನೆ ಪೂರ್ಣಗೊಳಿಸಲು 408ಲಕ್ಷ ರೂ. ಅಗತ್ಯವಿದೆ ಎಂದರು.

**ಕೃಷ್ಣ ಮೇಲ್ದಂಡೆ 2018ರೊಳಗೆ ಪೂರ್ಣ:** ಕೃಷ್ಣ ಮೇಲ್ದಂಡೆ ಯೋಜನೆಯನ್ನು 2018ರ ಒಳಗಾಗಿ ಪೂರ್ಣಗೊಳಿಸಲಾಗುವುದು ಎಂದು ಸದಸ್ಯ ವೀರಣ್ಣ ಮತ್ತಿಕಟ್ಟಿ ಅವರ ಪ್ರಶ್ನೆಗೆ ಸಚಿವರು ಉತ್ತರಿಸಿದರು.

ಮುಳವಾಡ-ಚಿಮ್ಮಲಗಿ, ರಾಂಪುರ, ಇಂಡಿ, ಕೊಪ್ಪಳ, ಹೆರಕಲ್, ಮುಲ್ಲಾಬಾದ್ ಹಾಗೂ ನಾರಾಯಣಪುರ ಬಲದಂಡೆ ವಿಸ್ತರಣೆ ಸೇರಿದಂತೆ 9ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಕೃಷ್ಣ ಬಿ ಸ್ಕೀಮಿನಡಿ 174ಟಿಎಂಸಿ ನೀರು ಹಂಚಿಕೆಯಾಗಿದ್ದು, ಅದರಲ್ಲೂ ಕೃಷ್ಣ ಮೇಲ್ದಂಡೆ ಯೋಜನೆಗೆ 134ಟಿಎಂಸಿ ನೀರು ನಿಗದಿಪಡಿಸಲಾಗಿದೆ. ಈ ಎಲ್ಲಾ ನೀರನ್ನು ಬಳಸಿಕೊಂಡು ಈ ಭಾಗದ 5.30ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು. ಕೇಂದ್ರ ಸರ್ಕಾರದ ನೂತನ ಭೂಸ್ವಾಧೀನ ಕಾಯ್ದೆ ಅನುಸಾರ ದೇಶದಲ್ಲಿ ಮೊದಲ ಬಾರಿಗೆ ಕರ್ನಾಟಕ ಸರ್ಕಾರ ನಿಯಮಾವಳಿಯನ್ನು ರೂಪಿಸಲಾಗಿದೆ. ಆಲಮಟ್ಟಿ ಜಲಾಶಯದ ಎತ್ತರವನ್ನು 524 ಮೀಟರ್‌ಗೆ ಹೆಚ್ಚಿಸುವುದರಿಂದ ಮುಳುಗಡೆಯಾಗಲಿರುವ ಗ್ರಾಮಗಳಲ್ಲಿ ಈ ಹೊಸ ನಿಯಮಾವಳಿ ಪ್ರಕಾರ ಪರಿಹಾರ ನೀಡಲಾಗುವುದು. ಇದಕ್ಕಾಗಿ 550ಕೋಟಿ ರೂ. ಪರಿಹಾರ ಮೊತ್ತ ಅಂದಾಜಿಸಲಾಗಿದೆ. ಮುಳುಗಡೆ ಪ್ರದೇಶವನ್ನು ಕಡಿಮೆ ಮಾಡುವ ದೃಷ್ಟಿಯಿಂದ ಅತ್ಯಾಧುನಿಕ ರಾಡಾರ್ ಸರ್ವೆಗೆ ಜಾಗತಿಕ ಟೆಂಡರ್ ಕರೆಯಲಾಗಿದೆ ಎಂದು ಹೇಳಿದರು.

## ರಾಜ್ಯದಲ್ಲಿ 2.4ಲಕ್ಷ ಎಕರೆ ಅರಣ್ಯಭೂಮಿ ಒತ್ತುವರಿ:

**-ಸಚಿವ ರಮಾನಾಥ ರೈ**

ಬೆಳಗಾವಿ, ಡಿ.10 (ಕರ್ನಾಟಕ ವಾರ್ತೆ):

ರಾಜ್ಯದಲ್ಲಿ 2,04,442ಎಕರೆ ಅರಣ್ಯ ಪ್ರದೇಶ ಒತ್ತುವರಿಯಾಗಿದೆ ಎಂದು ಅರಣ್ಯ ಖಾತೆ ಸಚಿವ ರಮಾನಾಥ ರೈ ವಿಧಾನ ಪರಿಷತ್‌ನಲ್ಲಿ ಹೇಳಿದರು.

ಸದಸ್ಯ ಐವಾನ್ ಡಿಸೋಜಾ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 1,10,626ಪ್ರಕರಣಗಳಲ್ಲಿ 2.4ಲಕ್ಷ ಎಕರೆ ಅರಣ್ಯ ಭೂಮಿ ಒತ್ತುವರಿಯಾಗಿದೆ. ಒತ್ತುವರಿಯಾಗಿರುವ ಭೂಮಿಯನ್ನು ಸಕ್ರಮಗೊಳಿಸುವ ನಿಟ್ಟಿನಲ್ಲಿ 1978ಕ್ಕಿಂತ ಮೊದಲು ಅತಿಕ್ರಮಣವಾಗಿರುವ 3ಎಕರೆವರೆಗಿನ ಒತ್ತುವರಿಯನ್ನು ಸಕ್ರಮಗೊಳಿಸಲು ರಾಜ್ಯ ಸಚಿವ ಸಂಪುಟದ ಒಪ್ಪಿಗೆ ಪಡೆದ ಬಳಿಕ ಕೇಂದ್ರದ ಅನುಮೋದನೆಗೆ ಕಳುಹಿಸಲಾಗುವುದು. 1980ಕ್ಕಿಂತ ಮೊದಲು ಕಂದಾಯ ಇಲಾಖೆಯಿಂದ ಮಂಜೂರಾದ ಪ್ರಕರಣಗಳನ್ನು ಅರಣ್ಯ ಸಂರಕ್ಷಣಾ ಕಾಯ್ದೆಯಡಿ ಅನುಮೋದನೆಗಾಗಿ ಕೇಂದ್ರಕ್ಕೆ ಸಲ್ಲಿಸಲಾಗುವುದು. 1980ರ ನಂತರ 3ಎಕರೆ ವರೆಗೆ ಒತ್ತುವರಿಯಾದ ಪ್ರಕರಣಗಳಲ್ಲಿ ಅಂತವರ ಪುನರ್ ವಸತಿಗಾಗಿ ಸರ್ಕಾರದಿಂದ ಕ್ರಮಕೈಗೊಳ್ಳಲಾಗುವುದು. ಮೇಲಿನ ಮೂರು ಪ್ರಕರಣಗಳಲ್ಲಿ ಒಳಗೊಳ್ಳದ 3ಎಕರೆಗಿಂತ ಹೆಚ್ಚಿನ ಒತ್ತುವರಿಯನ್ನು ಹೈಕೋರ್ಟ್ ಆದೇಶದ ಪ್ರಕಾರ ತೆರವುಗೊಳಿಸಲಾಗುವುದು ಎಂದರು.

ನಗರ ಪ್ರದೇಶದಲ್ಲಿನ ಅರಣ್ಯ ಭೂಮಿ ಅತಿಕ್ರಮಣವನ್ನು ನಿರ್ದಾಕ್ಷಿಣ್ಯವಾಗಿ ಸರ್ಕಾರ ತೆರವುಗೊಳಿಸಲಿದೆ ಎಂದು ಸದಸ್ಯ ಉಗ್ರಪ್ಪನವರ ಪ್ರಶ್ನೆಗೆ ಸಚಿವರು ಸ್ಪಷ್ಟಪಡಿಸಿದರು.

**ಅರಣ್ಯ ಇಲಾಖೆಯಲ್ಲಿ ವಿಲೀನ ಪರಿಶೀಲನೆ:** ಉತ್ತರಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಜೈಹಿಂದ್ ಸಾಮಿಲ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಡಿ ಗ್ರೂಪ್ ನೌಕರರನ್ನು ಅರಣ್ಯ ಇಲಾಖೆಯಲ್ಲಿ

ವಿಲೀನಗೊಳಿಸುವ ಕುರಿತು ಪರಿಶೀಲಿಸಲಾಗುವುದು. ಸದರಿ ಸಾಮಿಲ್‌ನ್ನು ಬೆಂಗಳೂರಿನ ವುಡ್ ಯಾರ್ಡ್ ಮಾದರಿಯಲ್ಲಿ ಪುನಶ್ಚೇತನಗೊಳಿಸುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ ಎಂದು ಸದಸ್ಯ ಬಸವರಾಜ ಹೊರಟ್ಟಿ ಅವರ ಪ್ರಶ್ನೆಗೆ ಸಚಿವರು ಸ್ಪಷ್ಟೀಕರಣ ನೀಡಿದರು.

**ಖಾಲಿ ಹುದ್ದೆ ನೇಮಕಾತಿ:** ಅರಣ್ಯ ಇಲಾಖೆಯಲ್ಲಿ ಖಾಲಿಯಿರುವ ವಿವಿಧ ಎರಡೂವರೆ ಸಾವಿರ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಾಗುವುದು. ಈಗಾಗಲೇ ಪ್ರಾದೇಶಿಕ ಅರಣ್ಯ ಅಧಿಕಾರಿಗಳ ನೇಮಕಾತಿ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ಆನೆ ದಾಳಿಯಿಂದ ಮೃತಪಟ್ಟವರಿಗೆ 5ಲಕ್ಷ ರೂ., ಜಾನುವಾರಿಗೆ 10ಸಾವಿರ, ಮೇಕೆಗೆ 5ಸಾವಿರ ರೂ, ಕೃಷಿ ಹಾನಿಗೆ 1ಲಕ್ಷ ರೂವರೆಗೆ ಪರಿಹಾರ ಧನ ಹೆಚ್ಚಳ ಮಾಡಲಾಗಿದೆ ಎಂದು ಸದಸ್ಯ ಮೋಟಮ್ಮ ಅವರ ಪ್ರಶ್ನೆಗೆ ಎಂದರು.

ಆನೆದಾಳಿ ತಡೆಯುವ ನಿಟ್ಟಿನಲ್ಲಿ ಎಲ್ಲಾ ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸೂಕ್ಷ್ಮ ಪ್ರದೇಶಗಳನ್ನು ಗುರುತು ಮಾಡಿ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸೋಲಾರ್ ತಂತಿಬೇಲಿ ನಿರ್ಮಾಣಕ್ಕಾಗಿ ಶೇ.50ರಷ್ಟು  ಸಹಾಯಧನ, ಆನೆ ಕಾರಿಡಾರ್ ಒತ್ತುವರಿ ತೆರವು ಮಾಡಲಾಗುವುದು. ಸಕಲೇಶಪುರ ಬಳಿ 2 ಸಾವಿರ ಎಕರೆ ಖಾಸಗಿ ಜಮೀನಿನಲ್ಲಿ ಆನೆ ನಿವಾಸ ಸ್ಥಾನ ಆರಂಭಿಸುವ ಕುರಿತು ಸರ್ಕಾರ ಪರಿಶೀಲಿಸುತ್ತಿದೆ ಎಂದು ಉತ್ತರಿಸಿದರು.